ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1176
2	ಸದಸ್ಯರ ಹೆಸರು	ಡಾ|| ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)
3	ಉತ್ತರಿಸಬೇಕಾದ ದಿನಾಂಕ	22.09.2021
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕಂದಾಯ ಇಲಾಖೆಯಲ್ಲಿ ಬಾಕಿ ಇರುವ ಪೋಡಿ ಪ್ರಕರಣಗಳ ಸಂಖ್ಯೆ ಎಷ್ಟು; (ವಿವರಗಳನ್ನು ನೀಡುವುದು)	ಭೂಮಾಪನ ಇಲಾಖೆಯಲ್ಲಿ ಮಾಹೆ ಅಗಸ್ಟ್ 2021 ರ ಅಂತ್ಯಕ್ಕೆ ಒಟ್ಟು **1,31,411** ತತ್ಕಾಲ ಪೋಡಿ ಪ್ರಕರಣಗಳು ಬಾಕಿ ಇದ್ದು ಈ ಪೈಕಿ 66,210 ಅರ್ಜಿಗಳು ಪಹಣಿ ತಿದ್ದುಪಡಿಗಾಗಿ ಕಂದಾಯ ಶಾಖೆಯಲ್ಲಿ ಮತ್ತು 65,201 ಪ್ರಕರಣಗಳು ಅಳತೆಗಾಗಿ ಭೂಮಾಪನ ಶಾಖೆಯಲ್ಲಿ ಬಾಕಿ ಇರುತ್ತವೆ.
ಆ)	ಕಳೆದ 5 ವರ್ಷಗಳಿಂದ ಕಂದಾಯ ಇಲಾಖೆಯಲ್ಲಿ ಪೋಡಿಗಾಗಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ಹಾಗೂ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು;	ಕಳೆದ 5 ವರ್ಷಗಳಲ್ಲಿ ಭೂಮಾಪನ ಇಲಾಖೆಯಲ್ಲಿ ತತ್ಕಾಲ್ ಪೋಡಿ ಕೋರಿ ಸ್ವೀಕೃತವಾದ 4,18,095 ಅರ್ಜಿಗಳು ಮತ್ತು ಹಿಂದಿನ ಬಾಕಿ ಅರ್ಜಿಗಳು 87,906 ಸೇರಿದಂತೆ ಒಟ್ಟು 5,06,001 ಅರ್ಜಿಗಳು ಸ್ವೀಕೃತ ವಾಗಿರುತ್ತವೆ. ಇವುಗಳಲ್ಲಿ 3,74,590 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ, ಬಾಕಿ ಉಳಿದ 1,31,411 ಅರ್ಜಿಗಳ ಪೈಕಿ ಈ ಪೈಕಿ 66,210 ಅರ್ಜಿಗಳು ಪಹಣಿ ತಿದ್ದುಪಡಿಗಾಗಿ ಕಂದಾಯ ಶಾಖೆಯಲ್ಲಿ ಮತ್ತು 65,201 ಪ್ರಕರಣಗಳು ಅಳತೆಗಾಗಿ ಭೂಮಾಪನ ಶಾಖೆಯಲ್ಲಿ ಬಾಕಿ ಇರುತ್ತವೆ. ವಿವರವನ್ನು **ಅನುಬಂಧದಲ್ಲಿ** ಲಗತ್ತಿಸಿದೆ
ಇ)	ದೊಡ್ಡ ಪ್ರಮಾಣದಲ್ಲಿ ಪೋಡಿ ಪ್ರಕರಣಗಳು ಬಾಕಿ ಇರಲು ಕಾರಣವೇನು ?	**-: ತತ್ಕಾಲ್ ಪೋಡಿ ಪ್ರಕರಣಗಳ ವಿಲೇವಾರಿಗೆ ವಿಳಂಬವಾಗಲು ಕಾರಣಗಳು :-** 1) ಆಕಾರಬಂದು ಮತ್ತು ಪಹಣಿಗಳಲ್ಲಿ ದಾಖಲಾಗಿರುವ ವಿಸ್ತೀರ್ಣದಲ್ಲಿ ವ್ಯತ್ಯಾಸಗಳಿರುವುದು 2) ಪಹಣಿಯ ಕಾಲಂ 3 ಮತ್ತು 9 ರಲ್ಲಿನ ವಿಸ್ತೀರ್ಣ ದಲ್ಲಿ ವ್ಯತ್ಯಾಸ ಗಳಿರುವುದು. 3) ಪಹಣಿ ತಿದ್ದುಪಡಿ ಮಾಡಲು ಅವಶ್ಯಕವಾದ ಹಿಂದಿನ ಕಂದಾಯ ದಾಖಲೆಗಳು (ಮ್ಯುಟೇಷನ್, ಪಹಣಿ, ಮಂಜೂರಿ ಆದೇಶಗಳು-ಇತರೆ) ಲಭ್ಯವಾಗದಿರುವುದು. 4) ಜಮೀನಿನ ಮೂಲ ಭೂದಾಖಲೆಗಳು ಶಿಥಿಲವಾಗಿದ್ದು, ಅವುಗಳ ಪುನರ್ ನಿರ್ಮಾಣ

		ಮಾಡಲು ಹೆಚ್ಚಿನ ಕಾಲಾವಕಾಶಬೇಕಾಗುವುದು 5) ಭೂಮಂಜೂರಾತಿ ಪ್ರಕರಣಗಳಲ್ಲಿ ನಮೂನೆ 1-5 ಭರ್ತಿ ಮಾಡುವಲ್ಲಿ ಮಂಜೂರಾತಿ ದಾಖಲೆಗಳ ಸರಿಯಾಗಿ ಲಭ್ಯವಾಗದೇ ಇರುವುದು. ಮತ್ತು ಮಂಜೂರಿ ಹಾಗೂ ಅನುಭವ ವಿಸ್ತೀರ್ಣಗಳಲ್ಲಿ ವ್ಯತ್ಯಾಸ ಇರುವುದು. 6) ಅಳತೆ ವೇಳೆ ಜಮೀನಿನ ಹಕ್ಕು ಮತ್ತು ಗಡಿ ವಿಚಾರದಲ್ಲಿ ತಕರಾರು ಇರುವುದರಿಂದ, 7) ನ್ಯಾಯಾಲಯದಲ್ಲಿ ವಿವಾದಗಳಿರುವುದರಿಂದ 8) ಭೂಮಾಪಕರ ಲಭ್ಯತೆಗಿಂತ ಹೆಚ್ಚಿನ ಅರ್ಜಿಗಳು ಸ್ವೀಕೃತವಾಗುತ್ತಿರುವುದರಿಂದ ಪ್ರಕರಣಗಳು ಬಾಕಿ ಉಳಿಯುತ್ತಿರುತ್ತವೆ. ಮೇಲ್ಕಂಡ ಕಾರಣಗಳಿಂದ ತತ್ಕಾಲ್ ಪೋಡಿ ಪ್ರಕರಣಗಳ ವಿಲೇವಾರಿಯಲ್ಲಿ ವಿಳಂಬವಾಗುತ್ತಿದೆ

ಸಂಖ್ಯೆ: ಕಂಇ 156 ಎಸ್‌ಎಸ್‌ಸಿ 2021

(ಆರ್.ಅಶೋಕ)

ಕಂದಾಯ ಸಚಿವರು

ಅನುಬಂದ-1								LCQ--1176
ಕಳೆದ 5 ವರ್ಷಗಳಿಂದ ಭೂಮಾಪನ ಇಲಾಖೆಯಲ್ಲಿ ತತ್ಕಾಲ್ ಪೋಡಿಗಾಗಿ ಸ್ವೀಕೃತವಾಗಿರುವ ಅರ್ಜಿಗಳ ಪ್ರಗತಿ ವಿವರ								
ಕ್ರ	ಜಿಲ್ಲೆ	ಪ್ರಾ.ಶಿಲ್ಕು	ಸ್ವೀಕೃತಿ	ಒಟ್ಟು	ವಿಲೇ	ಬಾಕಿ	ಕಂದಾಯ ಶಾಖೆಯಲ್ಲಿ ಬಾಕಿ	ಭೂಮಾಪನ ಶಾಖೆಯಲ್ಲಿ ಬಾಕಿ
1	ಉಡುಪಿ	2124	8049	10173	7334	2839	2013	826
2	ಉತ್ತರಕನ್ನಡ	1382	7741	9123	7243	1880	525	1355
3	ಕೊಡಗು	278	1155	1433	1270	163	65	98
4	ಕೊಪ್ಪಳ	4006	11726	15732	11148	4584	2523	2061
5	ಕೋಲಾರ	4399	16309	20708	15266	5442	2561	2881
6	ಗದಗ	1656	7748	9404	7908	1496	574	922
7	ಗುಲ್ಬರ್ಗ	5130	16583	21713	15337	6376	2892	3484
8	ಚಾಮರಾಜನಗರ	1365	8732	10097	8250	1847	910	937
9	ಚಿಕ್ಕಬಳ್ಳಾಪುರ	1922	11778	13700	10247	3453	2106	1347
10	ಚಿಕ್ಕಮಗಳೂರು	2862	10675	13537	9170	4367	1930	2437
11	ಚಿತ್ರದುರ್ಗ	1861	13639	15500	11435	4065	1870	2195
12	ತುಮಕೂರು	5073	30929	36002	25708	10294	5280	5014
13	ದಕ್ಷಿಣ ಕನ್ನಡ	1012	5263	6275	4111	2164	1649	515
14	ದಾವಣಗೆರೆ	4051	14674	18725	13395	5330	3386	1944
15	ಧಾರವಾಡ	1194	6895	8089	6612	1477	486	991
16	ಬಳ್ಳಾರಿ	2494	12614	15108	11042	4066	2134	1932
17	ಬಾಗಲಕೋಟೆ	1259	7960	9219	7806	1413	667	746
18	ಬಿಜಾಪುರ	5768	16905	22673	17554	5119	2292	2827
19	ಬೀದರ್	2543	11676	14219	9753	4466	2323	2143
20	ಬೆಂಗಳೂರು ಗ್ರಾಮಾಂತರ	2676	16627	19303	14951	4352	2589	1763
21	ಬೆಂಗಳೂರು ಜಿಲ್ಲೆ	5420	11637	17057	10437	6620	3776	2844
22	ಬೆಳಗಾವ	3991	24126	28117	22415	5702	2763	2939
23	ಮಂಡ್ಯ	2998	30218	33216	23603	9613	5424	4189
24	ಮೈಸೂರು	3301	22932	26233	20750	5483	2786	2697
25	ಯಾದಗಿರ್	2508	9444	11952	8168	3784	1596	2188
26	ರಾಮನಗರ	4970	19945	24915	19031	5884	2604	3280
27	ರಾಯಚೂರು	3962	14458	18420	11574	6846	3300	3546
28	ಶಿವಮೊಗ್ಗ	2546	13142	15688	10129	5559	2621	2938
29	ಹಾವೇರಿ	2103	6032	8135	6805	1330	441	889
30	ಹಾಸನ	3052	28483	31535	26138	5397	2124	3273
	TOTAL	**87906**	**418095**	**506001**	**374590**	**131411**	**66210**	**65201**